ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಶ್ರೀರಂಗಪಟ್ಟಣ

ಸಿ.ಸಿ.631/2021

| | |
|---|---|
| ಸಿ.ಡಬ್ಲ್ಯೂ : | 1 |
| ಪಿ.ಡಬ್ಲ್ಯೂ : | 1 |

| | | |
|---|---|---|
| ಸಾಕ್ಷಿದಾರರ ಹೆಸರು | : | ಅರ್ಚನ ಎಂ.ವಿ |
| ತಂದೆ/ ಪತಿಯ ಹೆಸರು | : | ಆನಂದ್ ಕುಮಾರ್ |
| ವಯಸ್ಸು | : | 35 ವರ್ಷ |
| ವೃತ್ತಿ | : | ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಸೆಸ್ ಜಾಗೃತ ದಳ ಮಂಡ್ಯ |
| ವಾಸ | : | ಮಂಡ್ಯ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 12.02.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನಾನು ದಿನಾಂಕ 24.04.2020 ರಿಂದ 15.06.2021 ರವರೆಗೆ ಅರಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 30.03.2021 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿದ್ದು, ಅದೇನೆಂದರೆ ಚಿಕ್ಕಪಾಳ್ಯ ಗ್ರಾಮದಲ್ಲಿರುವ ಸೋಮೇಶ್ ರವರ ಅಂಗಡಿ ಎಲ್ಲೆಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ಚಾಸಾ.4 ಮತ್ತು 5 ರವರಿಗೆ ತಿಳಿಸಿ ನಂತರ ದಾಳಿ ಮಾಡುವ ಸಲುವಾಗಿ ಪಂಚರರನ್ನು ಬರಮಾಡಿಕೊಂಡು ನಂತರ ಠಾಣಾ SHO ರವರಿಗೆ ಇದರ ಬಗ್ಗೆ ದೂರನ್ನು ರಾತ್ರಿ 11.20 ಗಂಟೆಯಲ್ಲಿ ನೀಡಿರುತ್ತೇನೆ.

ನಂತರ ಇಲಾಖಾ ವಾಹನದಲ್ಲಿ ಚಿಕ್ಕಪಾಳ್ಯ ಗ್ರಾಮದ ಕಡೆಗೆ ಚಾಸಾ.4 ಮತ್ತು 5 ರವರ ಜೊತೆ ದಾಳಿ ಮಾಡುವ ಸಲುವಾಗಿ ಹೊರಟಿರುತ್ತೇನೆ. ನಾವು ಅಂಗ್ರಹಳ್ಳಿ ಗ್ರಾಮದ ಹತ್ತಿರ ಹೋಗುವ ಸಂದರ್ಬದಲ್ಲಿ ಚಾಸಾ.2 ಮತ್ತು 3 ರವರುಗಳು ದಾರಿಯಲ್ಲಿ ಹೋಗುತ್ತಿದ್ದು ನಾವು ವಾಹನವನ್ನು ನಿಲ್ಲಿಸಿ, ನಾನು ಅವರಿಗೆ ಮಾಹಿತಿಯನ್ನು ತಿಳಿಸಿ ದಾಳಿ ಮಾಡುವ ಸಲುವಾಗಿ

ಪಂಚರರಾಗಿ ಸಹಕರಿಸಲು ಕೇಳಿಕೊಂಡ ಮೇರೆಗೆ ಅವರುಗಳು ಒಪ್ಪಿಕೊಂಡಿದ್ದು, ನಂತರ ನಾವು ನಮ್ಮ ಜೀಪಿನಲ್ಲಿ ಹಾಗೂ ಪಂಚರರು ಅವರ ಬೈಕಿನಲ್ಲಿ ಘಟನಾ ಸ್ಥಳಕ್ಕೆ ಹೊರಟು ಸೋಮೇಶ್ ರವರ ಚಿಲ್ಲರೆ ಅಂಗಡಿಯ ಬಳಿ ಜೀಪನ್ನು ನಿಲ್ಲಿಸಿರುತ್ತೇವೆ. ನಂತರ ಸದರಿ ಅಂಗಡಿಯ ಸುತ್ತಾ ಮುತ್ತಾ ಪರಿಶೀಲನೆ ಮಾಡಲಾಗಿ ಸದರಿ ಅಂಗಡಿಯ ಹಿಂಭಾಗದಲ್ಲಿ ಒಂದು ಬಿಳಿಯ ಬಟ್ಟೆಯ ಬ್ಯಾಗಿನಲ್ಲಿ ಮಧ್ಯ ಇರುವುದು ಕಂಡು ಬಂದಿರುತ್ತದೆ. ನಂತರ ಸದರಿ ಬಿಳಿಯ ಬಟ್ಟೆಯ ಬ್ಯಾಗನ್ನು ತೆಗೆದು ನೋಡಲಾಗಿ ಅದರಲ್ಲಿ 90 ಎಂ.ಎಲ್ ನ 33 highwads cheers whisky ಯ ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂದಿರುತ್ತದೆ. ನಂತರ ಸೋಮೇಶ್ ರವರನ್ನು ವಿಚಾರಿಸಲಾಗಿ ಅವರು ಯಾವುದೇ ಪರವನಾಗಿಯನ್ನು ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸದರಿ ಮಧ್ಯವು ಅಕ್ರಮವಾಗಿ ಕೂಡಿಟ್ಟಿರುವ ಬಗ್ಗೆ ತಿಳಿದು ಬಂದಿದ್ದು ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವ ಸಲುವಾಗಿ ಎಲ್ಲಾ ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕವಾಗಿ ಬಟ್ಟೆ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಎ ಎಂಬ ಅಕ್ಷರದಿಂದ ಸೀಲು ಮಾಡಿ ಅವುಗಳನ್ನು ನಾನು ನನ್ನ ವಶಕ್ಕೆ ತೆಗೆದುಕೊಂಡಿರುತ್ತೇನೆ. ನಂತರ ಘಟನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ದಿನಾಂಕ 31.03.2021 ರಂದು ಮಧ್ಯ ರಾತ್ರಿ 12.20 ಗಂಟೆಯಿಂದ 2.00 ಗಂಟೆಯವರೆಗೆ ವಿದ್ಯುತ್ ದೀಪದ ಬೆಳಕಿನಲ್ಲಿ ಹಗೂ ನಾಮ್ಮ ಇಲಾಖಾ ಜೀಪಿನ ಹೆಡ್ ಲೈಟಿನ ಬೆಳಕಿನಲ್ಲಿ ಜರುಗಿಸಿರುತ್ತೇವೆ. ನಂತರ ವಾಪಾಸ್ಸು ಠಾಣೆಗೆ ಬಂದು ವಶಪಡಿಸಿಕೊಂಡ ವಸ್ತುಗಳನ್ನು SHO ರವರ ವಶಕ್ಕೆ ನೀಡಿರುತ್ತೇವೆ. ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮಹಜರ್ ಅನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ 33 ಖಾಲಿ ಟೆಟ್ರಾ ಪ್ಯಾಕೆಟ್ ಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ನಾನು ಆ ದಿನ ವಶಪಡಿಸಿಕೊಂಡ ವಸ್ತುಗಳು ಇವುಗಳೇ ಎಂದು ನುಡಿಯುತ್ತಾರೆ. ಸಾಕ್ಷಿಯು ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಎಂ.ಒ.1 ರಿಂದ 33 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು: ಆರೋಪಿತರ  ಪರ ವಕೀಲರಿಂದ</u>

ಮಾಹಿತಿ ಬಂದಾಗ ನಾನು ಪೊಲೀಸ್ ಠಾಣೆಯಲ್ಲಿ ಇದ್ದೆನು. ನಮ್ಮ ಠಾಣೆಯಿಂದ ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಸುಮಾರು 5-6 ಅಂತರ ಇರುತ್ತದೆ. ನಾವು ಠಾಣೆಯಿಂದ ಹೊರಟಾಗ ಸಮಯ ರಾತ್ರಿ ಸುಮಾರು 11.25 ಗಂಟೆಯಿಂದ 11.30 ಗಂಟೆ ಆಗಿರಬಹುದು. ದಾಳಿಗೆ ಹೋಗುವ ಮೊದಲು ಸರ್ಚ್ ಮಾಡುವ ಬಗ್ಗೆ ವಾರೆಂಟನ್ನು ಮ್ಯಾಜಿಸ್ಟ್ರೇಟ್ ರವರಿಂದ ಪಡೆದುಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಖರೀದಿದಾರರು ಯಾರು ಇರಲಿಲ್ಲ. ಎಂ.ಒ.1 ರಿಂದ 33 ಗಳಿಗೆ ಪಂಚರ ಸಹಿಗಳನ್ನು

ಪಡೆದುಕೊಂಡಿರುವುದಿಲ್ಲ. ನನಗೆ ಘಟನಾ ಸ್ಥಳದ ಚೆಕ್ಕು ಬಂದಿ ಹೇಳಲು ಬರುತ್ತದೆ. ಸ್ಥಳದ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಆರೋಪಿಗೆ ಸೇರಿದ ಜಮೀನು ಇರುತ್ತದೆ, ದಕ್ಷಿಣಕ್ಕೆ ಶ್ರೀರಂಗಪಟ್ಟಣ - ಬನ್ನೂರಿಗೆ ಹೋಗುವ ಮುಖ್ಯ ರಸ್ತೆ ಇರುತ್ತದೆ, ಪೂರ್ವಕ್ಕೆ ಅಂಗ್ರಹಳ್ಳಿ ಕೋರೆಗೆ ಹೋಗುವ ರಸ್ತೆ ಇರುತ್ತದೆ. ಈ ಚೆಕ್ಕು ಬಂದಿಯಲ್ಲಿ ಚಿಲ್ಲರೆ ಅಂಗಡಿ ಬರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ಚಿಲ್ಲರೆ ಅಂಗಡಿ ಇರುವ ಬಗ್ಗೆ ನಿಮ್ಮ ಪಂಚನಾಮೆಯ ಯಾವುದೇ ದಿಕ್ಕಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿರುವಂತೆ ಅಲ್ಲಿ ಯಾವುದೇ ಚಿಲ್ಲರೆ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಆ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆಯನ್ನು ತೋರಿಸುವ ಸಲುವಾಗಿ ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲೇ ಕುಳಿತು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.